# ಅಧ್ಯಾಯ ೬

# ಭಾರತೀಯ ಶಿಕ್ಷಣದ ಹೊಸ ಇತಿಹಾಸದತ್ತ

ಭಾರತೀಯ ಶಿಕ್ಷಣದ ಇತಿಹಾಸವನ್ನು ನಮ್ಮ ರಾಷ್ಟ್ರೀಯ ಬದುಕಿನ ನಾನಾಮುಖಗಳ ಅರ್ಥಪೂರ್ಣ ಬೆಳವಣಿಗೆಯೆಂಬಂತೆ ಇದುವರೆಗೂ ಯಾರೂ ಬರೆದಿಲ್ಲ. ಶಿಕ್ಷಣಕ್ಕೂ ಸಮಾಜಕ್ಕೂ ನಡುವೆ ಇರಬಹುದಾದ ಸಂಬಂಧದ ವಿವರಗಳನ್ನು ಹಾಗೂ ಒಳಸೂಕ್ಷ್ಮಗಳನ್ನು ಪರಿಶೀಲಿಸುವ ಪ್ರಯತ್ನಗಳೂ ಈ ವರೆಗೆ ನಡೆದಿಲ್ಲ. ಒಂದು ಸಮಾಜ ಅಥವಾ ಅದರ ಅಂಗಗಳನ್ನು ನಿರಂತರವಾಗಿ ಹಾಗೂ ಅನೂಚಾನವಾಗಿ ಪುನರುತ್ಪಾದನೆ ನಡೆಸಿ ಅದರ ಭವಿಷ್ಯವನ್ನು ರೂಪಿಸಿಕೊಳ್ಳುವ ದ್ಯೋತಕವೇ ಶಿಕ್ಷಣ ಹಾಗೂ ಇಂಥ ಶಿಕ್ಷಣವನ್ನು ಒದಗಿಸುವವರಿಗೆ ತಮ್ಮ ಸಮಾಜದ ಕುರಿತ ಒಂದು ಮಟ್ಟದ ಸ್ವ ಅರಿವು ಕೂಡ ಇರಬೇಕಾಗುತ್ತದೆ ಎಂಬುದು ಇಂದು ಬಹುತೇಕರಿಗೆ ಮನವರಿಕೆಯಾಗಿದೆ. ಹಾಗಾಗಿ ಯಾವುದೇ ಸಮಾಜದ ಅಧ್ಯಯನವನ್ನು ನಡೆಸಬೇಕಾದರೆ ಅದರ ಶಿಕ್ಷಣ ವ್ಯವಸ್ಥೆಯ ಅಧ್ಯಯನವು ನಿರ್ಣಾಯಕವಾದ ಮಹತ್ವವನ್ನು ಹೊಂದಿದೆ ಮತ್ತು ಶಿಕ್ಷಣ ವ್ಯವಸ್ಥೆಯನ್ನು ಅದು ಅಭಿವೃದ್ಧಿ ಹೊಂದಿರುವ ಸಾಮಾಜಿಕ ಸಂದರ್ಭದೊಳಗಿಟ್ಟೇ ಪರಿಶೀಲಿಸಬೇಕಾಗುತ್ತದೆ. ಕಳೆದ ಹತ್ತು ಅಥವಾ ಹದಿನೈದು ವರ್ಷಗಳಲ್ಲಿ, ಅನೇಕ ಪುಸ್ತಕಗಳು ಮತ್ತು ಲೇಖನಗಳು ಬಹುತೇಕ ಪಾಶ್ಚಾತ್ಯ ಪ್ರಪಂಚದಲ್ಲಿ ಪ್ರಕಟಗೊಂಡಿವೆ. ಅವುಗಳ ವಿಷಯವಸ್ತುಗಳ ವೈವಿಧ್ಯತೆಯ ನಡುವೆಯೂ ಅವುಗಳ ದೃಷ್ಟಿಕೋನದಲ್ಲಿ ಸಾಮ್ಯತೆಯಿದೆ.[೧] ಅವುಗಳಲ್ಲಿ ಸರಿಸುಮಾರು ಎಲ್ಲವೂ, ಸಾಮಾಜಿಕ ಸಂದರ್ಭದೊಳಗೆ ಶಿಕ್ಷಣವನ್ನು ನೋಡಲು ಯತ್ನಿಸುತ್ತವೆ. ಈ ವಿಧಾನವು, ಇತಿಹಾಸತಜ್ಞರು ಈ ತನಕ ನಿರ್ಲಕ್ಷಿಸಿದ್ದ ಕ್ಷೇತ್ರದಲ್ಲಿ ಹೊಸ ದೃಷ್ಟಿಕೋನವನ್ನು ತೆರೆದಿದೆ.[೨]

ಭಾರತದಲ್ಲಿ, ಶಿಕ್ಷಣದ ಇತಿಹಾಃಸವೆಂದರೆ ಬಹುತೇಕವಾಗಿ ಆ ವ್ಯವಸ್ಥೆಯು ಬೆಳೆದುಬಂದ ವೃತ್ತಾಂತದ ವಿವರಗಳಿಗೆ ಸಂಬಂಧಿಸಿದೆ. ಈ ವಿವರಗಳನ್ನು ಸರ್ಕಾರದ ನೀತಿ - ನಿರ್ಣಯಗಳು, ಶಿಕ್ಷಣದ ಆಯೋಗದ ವರದಿಗಳು, ಕಾಯಿದೆಗಳು ಮತ್ತು ಸನ್ನದುಗಳನ್ನು ಆಧರಿಸಿ ಕಟ್ಟಲಾಗಿದೆ. ಈ ತರಹದ ಅತ್ಯುತ್ತಮ ಮತ್ತು ಅತ್ಯಂತ ಸಮಗ್ರ ಇತಿಹಾಸ ಯಾವುದೆಂದರೆ ಎಸ್. ನೂರುಲ್ಲ ಮತ್ತು ಜೆ.ಪಿ. ನಾಯಕ್ ಅವರ ಬರಹವಾಗಿದೆ[೩]. ಭಾರತೀಯ ಶಿಕ್ಷಣದ ಇತಿಹಾಸವನ್ನು ಇಲ್ಲಿ ಸರ್ಕಾರ ಮತ್ತು ಖಾಸಗಿ, ಸ್ಥಳೀಯ ಮತ್ತು ಪಾಶ್ಚಾತ್ಯ ಹಾಗೂ ಸಾಮ್ರಾಜ್ಯಶಾಹಿ ಮತ್ತು ರಾಷ್ಟ್ರೀಯವಾದಿ ಚೌಕಟ್ಟಿನೊಳಗೆ ವ್ಯಾಖ್ಯಾನಿಸಲಾಗಿದೆ. ಇದು ಆಧುನಿಕ ಶೈಕ್ಷಣಿಕ ಇತಿಹಾಸದ ಕಾಲಾನುಕ್ರಮದ ವರ್ಗೀಕರಣವನ್ನು ಪರಿಚಯಿಸುತ್ತದೆ. ಈ ವಿಷಯದ ಕುರಿತ ಹೆಚ್ಚಿನ ಪುಸ್ತಕಗಳಲ್ಲಿ ನಾಯಕ್ ಮತ್ತು ನೂರುಲ್ಲ ಹೆಚ್ಚುಕಡಿಮೆ ಇದೇ ವಿಧಾನವನ್ನು

ಅನುಸರಿಸಿದ್ದಾರೆ. ಭಾರತೀಯ ಶಿಕ್ಷಣದ ಇತಿಹಾಸದ ಮೇಲೆ ಕೇಳ, ಜುಶಿ[೫], ರಾವತ್[೬], ಸಿಕ್ವೇರ[೭] ಮತ್ತು ಮುಖರ್ಜಿ[೮] ಸೇರಿದಂತೆ ಅನೇಕರು ಪುಸ್ತಕಗಳನ್ನು ಬರೆದಿದ್ದಾರೆ. ಅವುಗಳನ್ನು ಯಾವ ಉದ್ದೇಶಕ್ಕಾಗಿ ಬರೆಯಲಾಗಿದೆಯೋ, ಆ ಉದ್ದೇಶವನ್ನು ಪೂರೈಸುವುದಕ್ಕಾಗಿ ಆ ಪುಸ್ತಕಗಳು ಪರ್ಯಾಪ್ತವಾಗಿವೆ. ಆದರೆ ಇತಿಹಾಸ ಕ್ಷೇತ್ರದ ಪಂಡಿತರು ಈಗ ಆಸಕ್ತಿ ತೋರಿರುವ ಪ್ರಶ್ನೆಗಳ ಮೇಲೆ ಇವು ಬೆಳಕು ಚೆಲ್ಲುವುದಿಲ್ಲ.

ಇಲ್ಲಿತನಕ ಒಪ್ಪಿಕೊಂಡಿರುವ ಅಭಿಪ್ರಾಯಗಳನ್ನು ದೃಢೀಕರಿಸಲು ಅಥವಾ ಅಲ್ಲಗಳೆಯಲು ಮತ್ತು ಪ್ರಾಥಮಿಕ ದತ್ತಾಂಶವನ್ನು ಬಳಸಿಕೊಂಡು ಶೈಕ್ಷಣಿಕ ಅಭಿವೃದ್ಧಿಯ ಪಥದ ಹೆಚ್ಚು ಪರಿಪೂರ್ಣ ಚಿತ್ರಣವನ್ನು ರಚಿಸಲು ಬೇಕಾದ ಹೊಸ ನಿಜಾಂಶಗಳನ್ನು ಕಂಡುಹಿಡಿಯಲು ಈಗ ವಿಪುಲ ಅವಕಾಶವಿದೆ. ಈಗ ಲಭ್ಯವಿರುವ ನಾನಾ ಪ್ರಕಾರದ ದತ್ತಾಂಶಗಳು ಹಾಗೂ ಸಮಕಾಲೀನ ಇತಿಹಾಸವನ್ನು ಕಲಿಯುವ ಹೊಸ ವಿಧಾನಗಳನ್ನು ಮತ್ತು ಪರಿಕರಗಳನ್ನು ಗಮನದಲ್ಲಿಟ್ಟುಕೊಂಡಾಗ ಭಾರತೀಯ ಶಿಕ್ಷಣದ ಪ್ರಗತಿ ಮತ್ತು ಬೆಳವಣಿಗೆಯ ಮೇಲೆ ಹೊಸದಾಗಿ ಬೆಳಕು ಚೆಲ್ಲುವ ಅಗತ್ಯ ಕಂಡುಬರುತ್ತದೆ. ಇದಕ್ಕಾಗಿ ಅಂತಃಶಿಸ್ತೀಯ ವಿಧಾನದ ಅಗತ್ಯವಿದೆ ಹಾಗೂ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಮನಃಶಾಸ್ತ್ರ, ಮತ್ತು ರಾಜಕೀಯಶಾಸ್ತ್ರದ ವಿಧಾನಗಳನ್ನು ಭಾರತದ ಶೈಕ್ಷಣಿಕ ಇತಿಹಾಸಕ್ಕೆ ವ್ಯವಸ್ಥಿತವಾಗಿ ಅನ್ವಯಿಸಬೇಕಿದೆ.

ಬ್ರಿಟಿಷರು ಬರುವ ಮೊದಲು ಚಾಲ್ತಿಯಲ್ಲಿದ್ದ ದೇಶೀಯ ಶಿಕ್ಷಣ ವ್ಯವಸ್ಥೆಯನ್ನು (ಅದರ ವಿಸ್ತಾರ ಮತ್ತು ಪಠ್ಯಕ್ರಮಗಳು ಎರಡನ್ನೂ) ಅಧ್ಯಯನ ಮಾಡಬೇಕಿದೆ. ಆಂಗ್ಲ ಶಾಲೆಗಳು ಮತ್ತು ಅವುಗಳ ಮೂಲಗಳ ಕುರಿತು ದಾಖಲೆಗಳನ್ನು ಮುಂದಿಡಲಾಗಿದೆಯಾದರೂ, ಆ ಕಾಲದ ದೇಶೀಯ ಶಾಲೆಗಳ ಕುರಿತ ಮಾಹಿತಿ ಸಾಕಷ್ಟು ಕಡಿಮೆ ಇದೆ.[೯] ಈಗ ಅಗತ್ಯವಿರುವುದು ಏನೆಂದರೆ ದೇಶೀಯ ಸಂಸ್ಥೆಗಳಲ್ಲಿ ಪದವಿ ಪಡೆದವರು ಮತ್ತು ಅವರು ಭಾರತೀಯ ಆರ್ಥಿಕರಂಗದಲ್ಲಿ ಪಡೆದ ಕೆಲಸ; ಅವರಿಗೆ ಯಾವುದರ ಮೂಲಕ, ಯಾರಿಗಾಗಿ ಮತ್ತು ಯಾರು ನೆರವು ನೀಡಿದರು ಎನ್ನುವ ಕುರಿತು ಸ್ಪಷ್ಟ ನಿರೂಪಣೆ. ಅಲ್ಲದೆ ದೇಶೀಯ ಶಾಲೆಗಳು ಹೇಗೆ ಮತ್ತು ಏಕೆ ಅವನತಿ ಹೊಂದಿದವು ಎನ್ನುವ ಕುರಿತು ನಮಗೆ ಪ್ರತ್ಯಕ್ಷ ಸಾಕ್ಷ್ಯಾಧಾರದ ಅಗತ್ಯವಿದೆ.

ಶಿಕ್ಷಣದ ಇತಿಹಾಸದ ಯಾವುದಾದರೂ ಅಂಶದ ಕುರಿತು ಏನಾದರೂ ತಕ್ಕಮಟ್ಟಿಗಿನ ಅಧ್ಯಯನ ನಡೆದಿದ್ದರೆ ಅದು ಸರ್ಕಾರೀ ನೀತಿಗಳ ಕುರಿತು. ಆದರೆ ಭಾರತೀಯ ಶೈಕ್ಷಣಿಕ ನೀತಿಯು ಬ್ರಿಟೀಷ್ ರಾಜ್‌ನ ರಾಜಕೀಯ, ಆಡಳಿತಾತ್ಮಕ, ಆರ್ಥಿಕ ಮತ್ತು ಸಾಮಾಜಿಕ ನೀತಿಗಳಿಗೆ ಏನೂ ಸಂಬಂಧ ಪಡದ ಹಾಗೆ ರೂಪುಗೊಂಡಿದ್ದಲ್ಲ. ಕೆಲವು ನಿರ್ಧಾರಗಳನ್ನು ಏಕೆ ತೆಗೆದುಕೊಳ್ಳಲಾಯಿತು ಅಥವಾ ತೆಗೆದುಕೊಳ್ಳಲಾಗಿಲ್ಲ ಎಂದು ಅರ್ಥಮಾಡಿಕೊಳ್ಳಲು ಭಾರತ ಸರ್ಕಾರದ ಸಮಗ್ರ ನೀತಿ ಮತ್ತು ಉದ್ದೇಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಜೊತೆಗೆ, ಭಾರತವು

ಬ್ರಿಟೀಷರ ಆಳ್ವಿಕೆಯ ಅಡಿ ಇದ್ದುದರಿಂದ ಬ್ರಿಟೀಷ್ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಇತಿಹಾಸದ ಅಧ್ಯಯನವೂ ಅತ್ಯಗತ್ಯ. ನೀತಿಯ ಅಂತಿಮ ರೂಪದಲ್ಲಿ ಅಡಗಿದ ಹೊಂದಾಣಿಕೆಯನ್ನು ಅರ್ಥ ಮಾಡಿಕೊಳ್ಳುವುದು ಎಂದರೆ ಅದರೊಳಗೆ ಹಾಸುಹೊಕ್ಕಾಗಿರುವ ವಿಚಾರಗಳು ಮತ್ತು ಪ್ರಭಾವಗಳ ಎಳೆಗಳನ್ನು ಪತ್ತೆ ಹಚ್ಚುವುದು ಎಂದರ್ಥ. ಉದಾಹರಣೆಗೆ, ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಶೈಕ್ಷಣಿಕ ನೀತಿಯ ಮೇಲೆ ಇಂಗ್ಲಂಡ್‌ನಲ್ಲಿದ್ದ ಕ್ರೈಸ್ತ ಧರ್ಮ ಬೋಧಕರು, ಮುಕ್ತ ವ್ಯಾಪಾರಿಗಳು, ಉದಾರವಾದಿಗಳು ಮತ್ತು ಪ್ರಯೋಜಕತಾ ವಾದಿಗಳು ಮತ್ತು ಭಾರತದ ಮಿಷನರಿಗಳು ಮತ್ತು ಇತರ ಪಂಗಡಗಳ ಒತ್ತಡದ ಕಾರಣ ಉಂಟಾದ ಆಡಳಿತಾತ್ಮಕ ಮತ್ತು ಆರ್ಥಿಕ ಆಲೋಚನೆಗಳು ಪ್ರಭಾವ ಬೀರಿದವು. ನೀತಿನಿಯಮಗಳಿಗೆ ಸಂಬಂಧಿಸಿದ ನಿರ್ಧಾರಗಳನ್ನು ಅರ್ಥ ಮಾಡಿಕೊಳ್ಳಲು ಅವುಗಳ ಹಿಂದೆ ಹೋಗಬೇಕಾಗುತ್ತದೆ. ಅಂದರೆ ಹೇಗೆ ಮತ್ತು ಏಕೆ ಈ ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ನಿರ್ದಿಷ್ಟ ನೀತಿಯೊಂದು ಅಪೇಕ್ಷಿತ ಫಲಿತಾಂಶವನ್ನು ಏಕೆ ನೀಡಲಿಲ್ಲ ಎಂದು ಇತಿಹಾಸ ತಜ್ಞರು ವಿವರಿಸಲು ಇಚ್ಛಿಸಿದಲ್ಲಿ, ಆ ಕಾಲದ ದೇಶೀಯ ಸಮಾಜ ಮತ್ತು ರಾಜಕೀಯವನ್ನು ಅರಿತುಕೊಳ್ಳಬೇಕಾಗುತ್ತದೆ. ಇವೆಲ್ಲವುಗಳಿಗೆ ಸರ್ಕಾರಿ ದಾಖಲೆಗಳು ಮತ್ತು ಕಡತಗಳ ಮತ್ತು ಖಾಸಗಿ ಪತ್ರಗಳು ಮತ್ತು ಸಂಬಂಧಿತ ಅಧಿಕಾರಿಗಳ ಪತ್ರ ವ್ಯವಹಾರವನ್ನು ವಿವರವಾಗಿ ಅಧ್ಯಯನ ಮಾಡಬೇಕಾಗುತ್ತದೆ.

ಶಿಕ್ಷಣವು ೧೯೨೧ರ ತನಕ ಮುಖ್ಯವಾದ ವಿಷಯವಾಗಿತ್ತು. ಆದರೆ ಆ ದಿನಗಳಲ್ಲಿಯೂ ನೀತಿನಿಯಮ ಹಾಗೂ ವ್ಯವಸ್ಥೆಗೆ ಸಂಬಂಧಿಸಿದಂತೆ ಪ್ರಾಂತೀಯ ಮಟ್ಟದಲ್ಲಿ ಭಿನ್ನತೆ ಇತ್ತು. ಅಲ್ಲದೆ, ಉಪಖಂಡದಾದ್ಯಂತ ಪ್ರಗತಿಯ ದರದಲ್ಲಿ ಏಕರೂಪತೆ ಇರಲಿಲ್ಲ. ಒಂದು ಪ್ರದೇಶಕ್ಕೆ ಹೋಲಿಸಿದರೆ ಇನ್ನೊಂದು ಪ್ರದೇಶದ ಪ್ರಗತಿಯ ಮಟ್ಟದಲ್ಲಿ ಹಾಗೂ ಒಂದೇ ಪ್ರದೇಶದಲ್ಲಿ ಎರಡು ಪಂಗಡಗಳ ನಡುವಿನ ಪ್ರಗತಿಯ ಮಟ್ಟದಲ್ಲಿ ವ್ಯತ್ಯಾಸವಿತ್ತು. ಕೆಲವು ಪ್ರದೇಶಗಳು, ಸಮುದಾಯಗಳು ಅಥವಾ ಜಾತಿಗಳು ಇತರವುಗಳಿಗಿಂತ ಹೇಗೆ ಶೈಕ್ಷಣಿಕ ಮುನ್ನಡೆ ಸಾಧಿಸಿದವು? ಈ ಪ್ರಶ್ನೆಗಳಿಗೆ ಉತ್ತರ ನೀಡಲು ನಮಗೆ ಶಿಕ್ಷಣದ ಪ್ರಾದೇಶಿಕ ಮತ್ತು ಜಿಲ್ಲಾ ಮಟ್ಟದ ಇತಿಹಾಸ ಬೇಕು.[೧೧] ಪ್ರಾಥಮಿಕ, ಪ್ರೌಢ, ವಿಶ್ವವಿದ್ಯಾಲಯ, ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣದ ಕ್ಷೇತ್ರಗಳನ್ನು ಸಹ ಸಂಪೂರ್ಣವಾಗಿ ಅನ್ವೇಷಿಸಬೇಕಾಗುತ್ತದೆ. ಪ್ರಾಥಮಿಕ ಶಿಕ್ಷಣದ ನಿಧಾನಗತಿಯ ಪ್ರಗತಿಯನ್ನು ಪರಿಶೀಲಿಸುವುದಲ್ಲದೆ, ಪ್ರಾಥಮಿಕ ಶಾಲೆಗಳ ಶಿಕ್ಷಣದ ಗುಣಮಟ್ಟ ಮತ್ತು ಅದರಿಂದ ಪ್ರಾಥಮಿಕ ಶಿಕ್ಷಣದ ಮೇಲಾದ ಪ್ರಭಾವವನ್ನು ಸಹ ಇತಿಹಾಸತಜ್ಞರು ಅಧ್ಯಯನ ಮಾಡಬೇಕಾಗುತ್ತದೆ. ಕೆಲ ಇತಿಹಾಸತಜ್ಞರು ಪ್ರಾಥಮಿಕ ಶಿಕ್ಷಣವನ್ನು ಸ್ಥಳೀಯ ಮಟ್ಟದಲ್ಲಿ ಪರಿಶೀಲಿಸಲು ಮುಂದೆ ಬಂದಿದ್ದಾರೆ ಹಾಗೂ ಶಾಲೆಗಳು, ಶಿಕ್ಷಕರು, ಪಠ್ಯಕ್ರಮ, ಶೈಕ್ಷಣಿಕ ಪ್ರಕ್ರಿಯೆ ಮುಂತಾದುವುಗಳ ಬದಲಾಗಿ ನೀತಿನಿಯಮ ಮತ್ತು ಆಡಳಿತಕ್ಕೆ

ಸಂಬಂಧಿಸಿದ ಪ್ರಶ್ನೆಗಳ ಮೇಲೆ ಕೇಂದ್ರೀಕರಿಸಿದ್ದಾರೆ. ಜನರ ಶಿಕ್ಷಣದಲ್ಲಿ, ಅದರ ಕುರಿತು ಮೇಲ್ವರ್ಗಗಳು ಹೊಂದಿರುವ ಮನೋಭಾವ ಮತ್ತು ಈ ಶಿಕ್ಷಣದಿಂದ ಪ್ರಯೋಜನ ಪಡೆಯುವವರು ಹೊಂದಿರುವ ಮನೋಭಾವವನ್ನು ಅರಿತುಕೊಳ್ಳಬೇಕಾಗುತ್ತದೆ.

ಕಾರ್ಮಿಕ ವರ್ಗಗಳ ನಡುವಿನ ಶೈಕ್ಷಣಿಕ ಚಳವಳಿಗಳು, ಶಿಕ್ಷಣದಲ್ಲಿ ಕಾರ್ಮಿಕ ಸಂಘಟನೆಗಳು ತೋರಿದ ಆಸಕ್ತಿ ಮತ್ತು ಶಿಕ್ಷಣದತ್ತ ಕೈಗಾರಿಕಾ ಮತ್ತು ಕೃಷಿ ಕಾರ್ಮಿಕರು ಹೊಂದಿದ್ದ ಮನೋಭಾವವನ್ನು ನಾವು ಅರಿತುಕೊಳ್ಳಬೇಕಾಗುತ್ತದೆ. ಪ್ರಾಥಮಿಕ ಶಾಲೆಗಳು ತಮ್ಮನ್ನು ಅವಲಂಬಿಸಿರುವವರಲ್ಲಿ ವರ್ಗದಲ್ಲಿ ಯಾವ ರೀತಿಯ ಮೌಲ್ಯಗಳು ಮತ್ತು ಮನೋಭಾವವನ್ನು ಬಿತ್ತಿವೆ ಎಂಬುದನ್ನು ಪ್ರತಿಯೊಬ್ಬರು ತಿಳಿದುಕೊಳ್ಳಲು ಇಚ್ಛಿಸುತ್ತಾರೆ. ಪ್ರಜಾತಾಂತ್ರಿಕತೆ ಅಥವಾ ಸೆಕ್ಯುಲರಿಸಂ ಅಥವಾ ಕೋಮುವಾದ ಮುಂತಾದ ಸಾರ್ವಜನಿಕ ಪ್ರಶ್ನೆಗಳು ಮಾತ್ರವಲ್ಲ ವೈಯಕ್ತಿಕ ಮನೋಭಾವ ಮತ್ತು ಮೌಲ್ಯಗಳು ಸಹ ಇದರಲ್ಲಿ ಸೇರಿಕೊಂಡಿವೆ. ಇಂಗ್ಲಂಡ್‌ನಲ್ಲಿ ೧೯೬೦ರ ದಶಕದಲ್ಲಿ ನಡೆದ ಅನೇಕ ಅಧ್ಯಯನಗಳು ಅಲ್ಲಿನ ಹತ್ತೊಂಬತ್ತನೆಯ ಶತಮಾನದ ಜನರ ಶೈಕ್ಷಣಿಕ ವಿಚಾರಗಳು ಮತ್ತು ನೀತಿಗಳ ಮೇಲೆ ಬೆಳಕು ಚೆಲ್ಲಿದವು. ಕಲಿಯುವ ಕಾತರ ಮತ್ತು ಮುದ್ರಿತ ಶಬ್ದಗಳ ವಿಷಯದಲ್ಲಿ ಇದ್ದ ಉತ್ಸಾಹ ಹೇಗೆ ಆಂಗ್ಲ ಕಾರ್ಮಿಕ ವರ್ಗದ ತೀವ್ರಗಾಮಿ ಸಂಸ್ಕೃತಿಯ (ಡಿಚಿಜiಛಿಚಿಟ ಛಿuಟಣuಡಿe) ಪ್ರಮುಖ ಅಂಶವೆನಿಸಿದವು ಎಂಬುದನ್ನು ಇ.ಪಿ. ಥಾಮ್ಸನ್ ಅವರು ತೋರಿಸಿಕೊಟ್ಟಿದ್ದಾರೆ.[೧೨] ಬ್ರಾಯನ್ ಸೈಮನ್ ಅವರ `ಎಜುಕೇಶನ್ ಅಂಡ್ ದ ಲೇಬರ್ ಮೂವ್‌ಮೆಂಟ್,' ೧೮೭೦-೧೯೨೦, ಹೆರಾಲ್ಡ್ ಸಿಲ್ವರ್ ಅವರ `ದ ಕಾನ್ಸೆಪ್ಟ್ ಆಫ್ ಪೊಪುಲರ್ ಎಜುಕೇಶನ್,' ಮೇರಿ ಸ್ಟುವರ್ಟ್ ಅವರ `ದ ಎಜುಕೇಶನ್ ಆಫ್ ದ ಪೀಪಲ್' ಇವು ಈ ನಿಟ್ಟಿನಲ್ಲಿ ಪ್ರಮುಖ ಕೃತಿಗಳೆನಿಸಿವೆ. ಭಾರತದಲ್ಲಿ ವಿವಿಧ ವರ್ಗಗಳು ಪ್ರಾಥಮಿಕ ಶಿಕ್ಷಣದತ್ತ ಯಾವ ರೀತಿಯ ಮನೋಭಾವವನ್ನು ಹೊಂದಿದ್ದವು ಎನ್ನುವ ಕುರಿತು ನಮಗೆ ತಿಳಿದಿರುವುದು ತೀರಾ ಕಡಿಮೆ. ಪ್ರಾಥಮಿಕ ಶಿಕ್ಷಣವನ್ನು ವಿಸ್ತರಿಸಲು ಸರ್ ಜಾರ್ಜ್ ಕ್ಯಾಂಬೆಲ್ ಅವರು ಮಾಡಿದ ಪ್ರಯತ್ನವನ್ನು ಬಂಗಾಳದಲ್ಲಿ ಜಮೀನ್ದಾರರು ೧೮೭೦ರಲ್ಲಿ ವಿರೋಧಿಸಿದರು ಎಂಬುದಕ್ಕೆ ಒಂದಷ್ಟು ಕುರುಹುಗಳು ದೊರೆಯುತ್ತವೆ.೧೩ ಗೋಖಲೆಯ ಪ್ರಾಥಮಿಕ ಶಿಕ್ಷಣ ಮಸೂದೆಯನ್ನು ೧೯೧೧ರಲ್ಲಿ ಏಕೆ ವಿರೋಧಿಸಲಾಯಿತು?[೧೪] ಫಜ್ಲುಲ್ ಹಕ್ ಅವರು ಪ್ರಾಥಮಿಕ ಶಿಕ್ಷಣವನ್ನು ಬಂಗಾಳದ ಗ್ರಾಮೀಣ ಪ್ರದೇಶಗಳಿಗೆ ವಿಸ್ತರಿಸುವ ವೇಳೆ ಬೆಂಗಾಲಿ ಹಿಂದೂಗಳ ಒಂದು ವರ್ಗವು ಅದನ್ನು ಏಕೆ ವಿರೋಧಿಸಿತು?[೧೫] ಇಂತಹ ಮತ್ತು ಇದೇ ತೆರನಾದ ಪ್ರಶ್ನೆಗಳಿಗೆ ಉತ್ತರಿಸಬೇಕಿದೆ.

ಭಾರತೀಯ ವಿಶ್ವವಿದ್ಯಾಲಯಗಳ ಕುರಿತು ಒಂದಷ್ಟು ಅಧ್ಯಯನಗಳು ಇವೆ. ಕಲ್ಕತ್ತಾ ಮತ್ತು ಬಾಂಬೆ ವಿಶ್ವವಿದ್ಯಾಲಯಗಳು ತಮ್ಮ ಶತಮಾನೋತ್ಸವ ವರ್ಷದಲ್ಲಿ (೧೯೫೭) ತಮ್ಮ ಇತಿಹಾಸವನ್ನು ಪ್ರಕಟಿಸಿವೆ.[೧೬] ಆಲಿಘಡ ಮತ್ತು

ಬನಾರಸ್ ವಿಶ್ವವಿದ್ಯಾಲಯಗಳ ಇತಿಹಾಸವನ್ನೂ ಬರೆಯಲಾಗಿದೆ. ಅಲಹಾಬಾದ್ ವಿಶ್ವವಿದ್ಯಾಲಯದ ೭೫ನೇ ವರ್ಷಾಚರಣೆಯ ಸಂದರ್ಭದಲ್ಲಿ ಗ್ರಂಥ ಸಂಪುಟವೊಂದನ್ನು ಪ್ರಕಟಿಸಲಾಗಿದೆ.[೧೮] ಕೆಲ ಕಾಲೇಜುಗಳ ಇತಿಹಾಸವೂ ಲಭ್ಯ. ಆದರೆ ಸಂಸ್ಕೃತಿಯ ಸಂವಾಹಕರಾಗಿ ಅಥವಾ ಸಾಮಾಜಿಕ ಚಲನೆಗೆ ಸಂಬಂಧಪಟ್ಟಂತೆ ಮತ್ತು ವೃತ್ತಿಪರ, ರಾಜಕೀಯ ಮತ್ತು ಆಡಳಿತಾತ್ಮಕ ಗಣ್ಯರ ಆಯ್ಕೆಯಲ್ಲಿ ವಿಶ್ವವಿದ್ಯಾಲಯಗಳು ಅಥವಾ ಕಾಲೇಜುಗಳು ವಹಿಸಿದ ಪಾತ್ರದ ಕುರಿತು ಇವು ಯಾವುವೂ ಗಮನ ನೀಡುವುದಿಲ್ಲ. ಗಣ್ಯ ಶೈಕ್ಷಣಿಕ ಸಂಸ್ಥೆಯ ಸಾಮಾಜಿಕ ಸಂಯೋಜನೆಯು ಆರ್ಥಿಕ ಅಂಶಗಳು, ಸಾಮಾಜಿಕ ಶ್ರೇಣೀಕರಣದ ಮಾದರಿಗಳು, ಮತ್ತು ಸ್ಥಾಪಿತ ಅಧಿಕಾರಿ ವರ್ಗದ ಜಾಗೃತ ರಾಜಕೀಯ ನಿರ್ಧಾರಗಳ ಫಲಿತಾಂಶವಾಗಿರಬಹುದು.

ಶಿಕ್ಷಣದ ಇತಿಹಾಸದಲ್ಲಿ ಇರುವ ಪ್ರಮುಖ ಸಮಸ್ಯೆ ಎಂದರೆ ಗಣ್ಯ ವರ್ಗಗಳು ಮತ್ತು ನಿರ್ದಿಷ್ಟ ಸಂಸ್ಥೆಗಳ ನಡುವೆ ಇರುವ ಸಂಬಂಧವಾಗಿದೆ. `ಬಂಗಾಳ ಪುನರುಜ್ಜೀವನ'ದ ಹೆಚ್ಚಿನ ನಾಯಕರು ಕಲ್ಕತ್ತಾದ ಹಿಂದೂ ಕಾಲೇಜಿನಿಂದ ಬಂದವರಾಗಿದ್ದರು. ಇದೇ ರೀತಿ, ಎಲ್ಫಿನ್‌ಸ್ಟನ್ ಸಂಸ್ಥೆಯ ವಿದ್ಯಾರ್ಥಿಗಳು ಹತ್ತೊಂಬತ್ತನೆಯ ಶತಮಾನದಲ್ಲಿ ಬಾಂಬೆಯ ಬೌದ್ಧಿಕ, ಸಾಮಾಜಿಕ ಮತ್ತು ಸಾರ್ವಜನಿಕ ಬದುಕಿನಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದರು. ಗಣ್ಯ ಶೈಕ್ಷಣಿಕ ಸಂಸ್ಥೆಯೊಂದರ ಸಾಮಾಜಿಕ ಸಂಯೋಜನೆ ಮಾತ್ರವಲ್ಲದೆ ಅಲ್ಲಿ ಬೆಳೆಸುವ ಮನೋಭಾವಗಳು ಮತ್ತು ಮೌಲ್ಯಗಳು ಸಹ ಆಸಕ್ತಿದಾಯಕವಾಗಿರುತ್ತವೆ. ಟಿ.ಎಸ್ ಈಲಿಯೆಟ್ ಅವರು ತನ್ನ `ನೋಟ್ಸ್ ಟವರ್ಡ್ಸ್ ಡೆಫಿನಿಶನ್ ಆಫ್ ಕಲ್ಚರ್' ಕೃತಿಯಲ್ಲಿ, ಸಂಸ್ಕೃತಿಯ ರೂಪಾಂತರದಲ್ಲಿ ಕುಟುಂಬವನ್ನು ಪ್ರಾಥಮಿಕ ಸಾಧನವಾಗಿ ನೋಡುತ್ತಾರೆ. ನಿಸ್ಸಂದೇಹವಾಗಿ ಕುಟುಂಬವು ಪ್ರಮುಖವೆನಿಸಿದರೂ, ಶಾಲೆಗಳು ಮತ್ತು ಕಾಲೇಜುಗಳ ಪಾತ್ರವನ್ನು ಕಡೆಗಣಿಸುವಂತಿಲ್ಲ. ಫ್ರಾನ್ಸ್ನ ಹತ್ತೊಂಬತ್ತನೆಯ ಶತಮಾನದ ಗಣ್ಯ ಮತ್ತು ಕೆಲವು ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳ ಸಂಬಂಧವನ್ನು ಥಿಯೋಡೋರ್ ಜೆಲ್ಡಿನ್ ಅವರು ಪರಿಶೋಧಿಸಿದ್ದಾರೆ.

ಯಾರು ಶಿಕ್ಷಿತರಾಗಿದ್ದರು? ಅವರು ಏಕೆ ಉನ್ನತ ವ್ಯಾಸಂಗ ಮಾಡಿದರು? ಯಾವ ಜಾತಿ, ಆದಾಯ ವರ್ಗ ಮತ್ತು ಭಾಷಾ ಪ್ರಾಂತ್ಯಗಳಿಂದ ಅವರು ಬಂದಿದ್ದರು? ಅವರು ಏನನ್ನು ಕಲಿತರು? ನಂತರ ಅವರು ಯಾವ ಹುದ್ದೆಯನ್ನು ಅಲಂಕರಿಸಿದರು? – ಮುಂತಾದ ಪ್ರಶ್ನೆಗಳನ್ನು ಮುಂದಿಡಬೇಕಿದೆ. ಶಿಕ್ಷಕರ ಕುರಿತು ಸಹ ಇದೇ ರೀತಿಯ ಪ್ರಶ್ನೆಗಳನ್ನು ಕೇಳಬೇಕಿದೆ. ಬೋಧಕ ವರ್ಗದಲ್ಲಿ ಯಾರಿದ್ದರು? ಅವರು ಯಾವ ವೃತ್ತಿಯ ಅಭಿಲಾಷೆ ಹೊಂದಿದ್ದರು? ತನ್ನ ಪಾತ್ರ ಮತ್ತು ಜವಾಬ್ದಾರಿಯನ್ನು ಅವರು ಹೇಗೆ ಕಂಡರು? ಈ ಪ್ರಶ್ನೆಗಳನ್ನು ಕೇಳುವ ಮೂಲಕ ವಿಶ್ವವಿದ್ಯಾಲಯ ಮತ್ತು ಸಮಾಜದ ನಡುವೆ ಇದ್ದ ಸಂಬಂಧದ ಹೊಸ ಅರಿವು ಮುನ್ನೆಲೆಗೆ ಬರಬಹುದು.

ಆಕ್ಸ್ ಫರ್ಡ್ ಸಾಮಾಜಿಕ ಇತಿಹಾಸವನ್ನು ಆಲನ್ ಬುಲಕ್ ಮತ್ತು ಟಿ.ಎಚ್. ಆಶ್ಟನ್ ಅವರ ನಿರ್ದೇಶನದ ಅಡಿಯಲ್ಲಿ ಬರೆಯಲಾಗುತ್ತಿದೆ. ಇದೇ ವೇಳೆ ಶೆಲ್ಡನ್ ರೋತ್‌ಬ್ಲಾಟ್ ಅವರು, ಹತ್ತೊಂಬತ್ತನೆಯ ಶತಮಾನದ ಆಂಗ್ಲ ಸಮಾಜದಲ್ಲಿ ಕ್ಯಾಂಬ್ರಿಜ್ ವಹಿಸಿದ ಪಾತ್ರವನ್ನು ಪರಿಶೀಲಿಸಲು ಪ್ರಯತ್ನಿಸಿದ್ದಾರೆ.[೧೯] ಲಾರೆನ್ಸ್ ಸ್ಟೋನ್ ಅವರು, ೧೫೮೦ರಿಂದ ೧೯೧೦ರ ತನಕ ಆಕ್ಸ್ಫರ್ಡ್ ವಿದ್ಯಾರ್ಥಿ ಸಂಘಟನೆಯಲ್ಲಿ ಬದಲಾದ ಗಾತ್ರ ಮತ್ತು ಸಂಯೋಜನೆಯ ಸಂಖ್ಯಾಶಾಸ್ತ್ರೀಯ ಮತ್ತು ವ್ಯಕ್ತಿಚಿತ್ರ ಅಧ್ಯಯನವನ್ನು ಮಾಡಿದ್ದಾರೆ.

ತಾಂತ್ರಿಕ ಮತ್ತು ವೈಜ್ಞಾನಿಕ ಶಿಕ್ಷಣದ ಇತಿಹಾಸವನ್ನು ಸಹ ಕಲಿಯಬೇಕಾದ ಅಗತ್ಯವಿದೆ. ಪ್ರಾಯೋಗಿಕ ವಿಜ್ಞಾನ ಅಥವಾ ನೈಸರ್ಗಿಕ ಪ್ರಪಂಚದ ಅನ್ವೇಷಣೆಗೆ ಭಾರತದ ಸ್ಥಳೀಯ ಶಿಕ್ಷಣವು ಎಷ್ಟು ಒತ್ತು ನೀಡಿದೆ? ವೈಜ್ಞಾನಿಕ ಮತ್ತು ತಾಂತ್ರಿಕ ಶಿಕ್ಷಣದತ್ತ ಸರ್ಕಾರ ಯಾವ ರೀತಿಯ ನೀತಿಯನ್ನು ಹೊಂದಿತ್ತು? ತಾಂತ್ರಿಕ ಮತ್ತು ವೈಜ್ಞಾನಿಕ ಶಿಕ್ಷಣ ಮತ್ತು ಆರ್ಥಿಕ ಪ್ರಗತಿಯ ನಡುವಿನ ಕೊಂಡಿಯನ್ನು ಸಹ ಇನ್ನಷ್ಟು ಅನ್ವೇಷಣೆಗೆ ಒಳಪಡಿಸಬೇಕಾದ ಅಗತ್ಯವಿದೆ.

ಮಹಿಳೆಯರ ಶಿಕ್ಷಣದ ಕುರಿತು ಒಂದಷ್ಟು ಅಧ್ಯಯನಗಳು ನಡೆದಿದ್ದರೂ, ಭಾರತೀಯ ಕುಟುಂಬ ಮತ್ತು ಆರ್ಥಿಕತೆಯ ಗುಣಲಕ್ಷಣ ಮತ್ತು ಅದರಲ್ಲಿ ಮಹಿಳೆಯರ ಸ್ಥಾನದ ಕುರಿತು ಇದರಲ್ಲಿ ಒಳನೋಟದ ಕೊರತೆ ಎದ್ದು ಕಾಣುತ್ತದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಮತ್ತು ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಗಣನೀಯ ಪ್ರಮಾಣದ ಪ್ರತಿರೋಧವಿತ್ತು ಎನ್ನುವುದು ಎಲ್ಲರಿಗೂ ತಿಳಿದಿರುವ ವಿಚಾರ. ಇದು ಯಾವಾಗ, ಹೇಗೆ ಮತ್ತು ಏಕೆ ಬದಲಾಗತೊಡಗಿತು? ಶಿಕ್ಷಣ ಪಡೆದ ಮಹಿಳೆಯರು ಯಾರು? ಅವರೇಕೆ ಶಾಲಾ ಕಾಲೇಜುಗಳ ಮೆಟ್ಟಿಲು ಹತ್ತಿದರು? ಅವರ ಮನೋಭಾವದ ಮೇಲೆ ಶಿಕ್ಷಣ ಯಾವ ರೀತಿಯ ಪರಿಣಾಮ ಉಂಟು ಮಾಡಿತ್ತು? ಭಾರತೀಯ ಭಾಷೆಗಳಲ್ಲಿರುವ ಕಾದಂಬರಿಗಳು, ಸಣ್ಣಕಥೆಗಳು, ಆತ್ಮಚರಿತ್ರೆಗಳು, ಮಹಿಳೆಯರ ಶಿಕ್ಷಣದ ಕುರಿತು ಲೇಖಕರು ಮತ್ತು ಇತರರು ಹೊಂದಿದ್ದ ಮನೋಭಾವವನ್ನು ಅನಾವರಣಗೊಳಿಸುತ್ತವೆ.

ಶಿಕ್ಷಣದ ಪ್ರಗತಿ ಮತ್ತು ರಾಜಕೀಯ ಪ್ರಜ್ಞೆಯ ಬೆಳವಣಿಗೆಯ ನಡುವಿನ ಸಂಬಂಧವನ್ನು ಚೆನ್ನಾಗಿಯೇ ಅಧ್ಯಯನ ಮಾಡಲಾಗಿದೆ.[೨೨] ಅತಿಯಾಗಿ ಕಲಿತವರು ಹಾಗೂ ಸೂಕ್ತ ಉದ್ಯೋಗದ ಕೊರತೆಯುಳ್ಳವರ ನಡುವಿನ ಸಂಬಂಧ ಮತ್ತು ರಾಜಕೀಯ ಅಸಮಾಧಾನದ ನಡುವಿನ ಕೊಂಡಿಯು, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಸಾಮಾನ್ಯ ಪಾಡು ಎನಿಸಿದೆ. ಅನೇಕ ವಿದ್ಯಾವಂತರಿಗೆ ಕೆಲವೇ ಕೆಲವು ಕೆಲಸಗಳ ಆಯ್ಕೆ ಇರುವಾಗ ಅವರ ಮಹತ್ವಾಕಾಂಕ್ಷೆಗಳಿಗೆ ನಿರಾಸೆ ಉಂಟಾಗುತ್ತದೆ ಹಾಗೂ ತಮ್ಮ ಪ್ರತಿಭೆಗೆ ಮಣೆ ಹಾಕದ ಸಮಾಜದ ವಿರುದ್ಧ ತಿರುಗಿ ಬೀಳಲು ಅವರು ಸಜ್ಜಾಗುತ್ತಾರೆ. ಆದರೆ,

ಭಾರತದಲ್ಲಿ ಆಂಗ್ಲ ಶಿಕ್ಷಣದ ಪ್ರಸಾರದಿಂದ ಉಂಟಾದ ರಾಜಕೀಯ ಮತ್ತು ಸಾಮಾಜಿಕ ಪರಿಣಾಮಗಳು, ಮಿಲ್ ಮತ್ತು ಮೆಕಾಲೆಯಿಂದ ಉದಾರವಾದಿ ಚಿಂತನೆಗಳನ್ನು ತಮ್ಮದಾಗಿಸಿದ ಹಾಗೂ ಪ್ರಾತಿನಿಧಿಕ ಸಂಸ್ಥೆಗಳಿಗೆ ಬೇಡಿಕೆ ಇಟ್ಟ ಹೊಸ ಮಧ್ಯಮ ವರ್ಗದ ಪ್ರಗತಿಗಷ್ಟೇ ಸೀಮಿತವಾಗಿರದೆ ಹೆಚ್ಚು ಸೂಕ್ಷ್ಮ ಮತ್ತು ಸಂಕೀರ್ಣ ಹಾಗೂ ಭಿನ್ನವಾಗಿದ್ದವು. ಶಿಕ್ಷಣವು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಲಾಭಗಳನ್ನು ನೀಡಲು ಪ್ರಾರಂಭಿಸಿದ ತಕ್ಷಣವೇ, ಯಾರನ್ನು ವಿದ್ಯಾವಂತರನ್ನಾಗಿಸಬೇಕು ಎನ್ನುವ ಪ್ರಶ್ನೆಯು ಕಹಿ ವಿವಾದಕ್ಕೆ ಕಾರಣವಾಯಿತು. ಸಾವಿರದ ಎಂಟುನೂರರ ಎಂಬತ್ತರಲ್ಲಿ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಯ ಜಾರಿಯಿಂದ ಹಿಡಿದು ೧೯೦೯ ಮತ್ತು ೧೯೧೭ರ ಪ್ರಾಂತೀಯ ಶಾಸಕಾಂಗದ ಚುನಾವಣೆಗಳ ತನಕ ಮತದಾನದ ಹಕ್ಕಿಗೆ ಶಿಕ್ಷಣವೇ ಅರ್ಹತೆಯಾಗಿತ್ತು. ಯಾವ ಪಂಗಡಗಳಿಗೆ ಅಲ್ಲಿಯತನಕ ಶಿಕ್ಷಣವನ್ನು ನಿರಾಕರಿಸಲಾಗಿತ್ತೋ, ಅವರು ಶಿಕ್ಷಣದ ಬೇಡಿಕೆಯನ್ನು ಮುಂದಿಟ್ಟರು. ಇವರಲ್ಲಿ ಮದ್ರಾಸ್ ಮತ್ತು ಮಹಾರಾಷ್ಟ್ರದ ಬ್ರಾಹ್ಮಣೇತರರು, ಪರಿಶಿಷ್ಟ ಜಾತಿಗಳು, ಮಹಿಳೆಯರು ಮತ್ತು ಇತರ ಹಿಂದುಳಿದ ಪಂಗಡಗಳು ಸೇರಿದ್ದವು. ಶಿಕ್ಷಣಕ್ಕಾಗಿ ನಡೆದ ಹೋರಾಟವು, ಅನೇಕ ವಿಚಾರದಲ್ಲಿ ಶತಮಾನಗಳಷ್ಟು ಹಳೆಯದೆನಿಸಿದ ಮತ್ತು ಭಾರತೀಯ ಇತಿಹಾಸದಲ್ಲಿ ಆಳವಾಗಿ ಬೇರೂರಿದ್ದ ಅಸಮಾಧಾನಗಳಿಗೆ ಇನ್ನಷ್ಟು ಪೋಷಣೆ ನೀಡಿತು.[೨೩]

ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಭಾರತದಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಗೆ ದೊರೆತ ಶಿಕ್ಷಣದ ಕುರಿತು ಅನೇಕ ಅಧ್ಯಯನಗಳು ನಡೆದಿದ್ದರೂ, ಭಾರತೀಯ ಮುಸ್ಲಿಮರ ಶಿಕ್ಷಣದ ಕುರಿತು ಯಾವುದೇ ವ್ಯವಸ್ಥಿತ ಅಧ್ಯಯನ ನಡೆದಿಲ್ಲ. ಶಿಕ್ಷಣದಲ್ಲಿ ಮುಸ್ಲಿಮರು ಹಿಂದೆ ಬಿದ್ದಿರುವುದಕ್ಕೆ ಯಾವುದೇ ವಿವರಣೆ ದೊರೆಯುವುದಿಲ್ಲ. ಬಡತನವು ಇದಕ್ಕೆ ಒಂದು ಕಾರಣವಾಗಿದೆ. ಬಡತನದ ಜೊತೆಗೆ, ಮುಸ್ಲಿಂ ಮನಸ್ಸಿನ ಮೇಲೆ ಭದ್ರವಾದ ಹಿಡಿತ ಹೊಂದಿರುವ -ಸಾಂಪ್ರದಾಯಿಕ 'ಉಲೆಮಾ'ದ ನಾಯಕತ್ವದಲ್ಲಿ ಈ ಹಿಡಿತ ವ್ಯಕ್ತವಾಗುತ್ತದೆ- ಧಾರ್ಮಿಕ ಸಂಪ್ರದಾಯವು ಸಹ ಪ್ರಮುಖವಾದುದು. ಐತಿಹಾಸಿಕ ಮತ್ತು ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ, ಆಧುನಿಕ ಶಿಕ್ಷಣ ಪ್ರಕ್ರಿಯೆಯಲ್ಲಿ ತುಲನಾತ್ಮಕವಾಗಿ ಮುಸ್ಲಿಮರ ಕಡಿಮೆ ಪಾಲ್ಗೊಳ್ಳುವಿಕೆಯ ಸಮಸ್ಯೆಯನ್ನು ವಿಶ್ಲೇಷಿಸುವ ಅಗತ್ಯವಿದೆ. ಮುಸ್ಲಿಂ ಶಿಕ್ಷಣದ ಮೇಲೆ ಬೆಳಕು ಚೆಲ್ಲುತ್ತಿರುವ ಪಂಡಿತರು, ಭಾರತೀಯ ಮುಸ್ಲಿಮರ ಮೇಲೆ ಬ್ರಿಟಿಷ್ ಆಡಳಿತಾತ್ಮಕ ಮತ್ತು ಭೂಕಂದಾಯ ನೀತಿಗಳು ಬೀರಿದ ಪರಿಣಾಮವನ್ನು ತಿಳಿದುಕೊಳ್ಳುವ ಅಗತ್ಯವಿದೆ. ಅಲ್ಲದೆ ಮುಸ್ಲಿಮರು ಶಿಕ್ಷಣದ ವಿಷಯದಲ್ಲಿ ಹೊಂದಿದ್ದ ವ್ಯಕ್ತಿನಿಷ್ಠ ಪರಿಕಲ್ಪನೆಯನ್ನು ಅವರು ಅಧ್ಯಯನ ಮಾಡಬೇಕಾಗಿದೆ. ಏಕೆಂದರೆ ಇದು ಕಾಲ ಕಳೆದಂತೆ ರೂಪುಗೊಳ್ಳುತ್ತಾ ಹೋಗಿದೆ. ಮುಸ್ಲಿಂ ಗಣ್ಯ ವರ್ಗ ಮತ್ತು ಸಾಮಾನ್ಯ ಮುಸ್ಲಿಮರು ಇಸ್ಲಾಮಿಕ್ ಶಿಕ್ಷಣದ ವಿಷಯದಲ್ಲಿ ತಾತ್ವಿಕವಾಗಿ ಸಮಾನಾಭಿಪ್ರಾಯ ಹೊಂದಿದ್ದರೂ, ಎರಡು ವರ್ಗಗಳ ಶೈಕ್ಷಣಿಕ ಸಾಧನೆಯಲ್ಲಿ ಸಾಕಷ್ಟು ಅಂತರವಿದೆ, ಹೀಗಾಗಿ

ಇದು ಮುಸ್ಲಿಂ ಶಿಕ್ಷಣದ ಬೆಳವಣಿಗೆಯ ಮಾದರಿಯ ಕುರಿತು ಇನ್ನಷ್ಟು ಆಳವಾಗಿ ಅಧ್ಯಯನ ನಡೆಸಲು ಕರೆ ನೀಡುತ್ತದೆ.

ಹತ್ತೊಂಬತ್ತನೆಯ ಶತಮಾನದ ಹೆಚ್ಚಿನ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಕರು ಹೊಸ ಶಿಕ್ಷಣ ವ್ಯವಸ್ಥೆಯಲ್ಲಿ ಕಲಿತು ಬಂದವರಾಗಿದ್ದರು. ವಿದ್ಯಾವಂತ ಜನರು ಸುಧಾರಣೆಯ ಆದರ್ಶವನ್ನು ನಿರೂಪಿಸಿದರು ಹಾಗೂ ಈ ಅದರ್ಶಗಳು ಅವರ ಬೆಂಬಲಿಗರ ನಿರ್ದಿಷ್ಟ ಅಗತ್ಯಗಳು ಮತ್ತು ಆದರ್ಶಗಳನ್ನು ರೂಪಿಸಿದವು. ಈ ಸುಧಾರಣಾ ಚಳವಳಿಗಳ ಶೈಕ್ಷಣಿಕ ವಿಚಾರಗಳು ಮತ್ತು ಚಟುವಟಿಕೆಗಳನ್ನು ಹೆಚ್ಚು ವಿವರವಾಗಿ ಅಧ್ಯಯನ ಮಾಡಬೇಕಿದೆ.[೨೪] ಶಿಕ್ಷಣ ಕ್ಷೇತ್ರದಲ್ಲಿ ಕ್ರೈಸ್ತ ಮಿಷನರಿಗಳು ವಹಿಸಿದ ಪಾತ್ರದ ಕುರಿತು ಅನೇಕ ಪುಸ್ತಕಗಳಿದ್ದರೂ೨೫, ಇವು ಯಾವುವೂ ಈ ಸಂಸ್ಥೆಗಳಲ್ಲಿ ಶಿಕ್ಷಣ ಪಡೆದವರ ಮನೋಭಾವದ ಮೇಲೆ ಮಿಷನರಿ ಶಾಲೆಗಳು ಮತ್ತು ಕಾಲೇಜುಗಳು ಉಂಟು ಮಾಡಿದ್ದ ಪ್ರಭಾವದ ಕುರಿತು ವಿವರ ನೀಡುವುದಿಲ್ಲ.

ಈಸ್ಟ್ ಇಂಡಿಯಾ ಕಂಪನಿ ಸ್ಥಾಪಿಸಿದ ಶಾಲೆಗಳ ಬಾಗಿಲುಗಳು ಎಲ್ಲರಿಗೂ ತೆರೆದಿದ್ದವು. ಆದರೆ ಅವುಗಳ ವ್ಯವಸ್ಥೆಯು ಹೆಚ್ಚಾಗಿ ಸಮಾಜದ ಆಯ್ದ ವರ್ಗದವರಿಗಾಗಿಯೇ ಇತ್ತು. ಅದೇನೇ ಇದ್ದರೂ, ಸವಲತ್ತುಗಳಿಂದ ವಂಚಿತವಾದ ಪಂಗಡಗಳಿಗೆ ಮೇಲ್ಮುಖವಾಗಿ ಚಲಿಸಲು ಈ ಶಿಕ್ಷಣವು ಸಣ್ಣ ಪ್ರಮಾಣಯೇ ಆದರೂ ಪ್ರಮುಖ ಸಾಧನವೆನಿಸಿತ್ತು. ಜಾತಿ ರಚನೆಯ ಮೇಲೆ ಶಿಕ್ಷಣ ಉಂಟು ಮಾಡಿದ ಪ್ರಭಾವವನ್ನು ಸಮಾಜಶಾಸ್ತ್ರಜ್ಞರು ಅಧ್ಯಯನ ಮಾಡಿದ್ದಾರೆ. ತಮಿಳುನಾಡಿನ ನಾಡರ್ ಸಮುದಾಯದವರು ಸಂಪತ್ತು ಮತ್ತು ಶಿಕ್ಷಣವನ್ನು ಹೇಗೆ ಗಳಿಸಿದರು, ಬ್ರಾಹ್ಮಣರ ಆಚರಣೆಗಳು ಮತ್ತು ಪದ್ಧತಿಗಳನ್ನು ಹೇಗೆ ಅಳವಡಿಸಿಕೊಂಡರು ಮತ್ತು ಜಾತಿ ಶ್ರೇಣಿಯಲ್ಲಿ ಮೇಲ್ಮುಖವಾಗಿ ಹೇಗೆ ಚಲಿಸಿದರು ಎಂಬುದನ್ನು ರಾಬರ್ಟ್ ಹಾಡ್ಗ್ರೇವ್ ತೋರಿಸಿಕೊಟ್ಟಿದ್ದಾರೆ.[೨೯] ಇದೇ ರೀತಿಯ ಕೆಲಸವನ್ನು, ಒಡಿಶಾದ ಬೋಡರ ಕುರಿತು ಎಫ್.ಜಿ ಬೇಲಿ[೨೭], ಜಾಟವರ ಕುರಿತು ಮತ್ತು ಆಗ್ರಾದಲ್ಲಿ ವಾಸಿಸುತ್ತಿದ್ದ ಚಮ್ಮಾರರ ಒಂದು ಪಂಗಡದ ಕುರಿತು[೨೮] ಅವನ್ ಲಿಂಚ್ ಅವರು ಮಾಡಿದ್ದಾರೆ. ಕಾಯಸ್ಥ ಸಭಾ[೨೯], ಪತಿದಾರ ಯುವಕ ಮಂಡಲ[೩೦] ಮುಂತಾದ ಜಾತಿ ಸಂಘಟನೆಗಳ ಶೈಕ್ಷಣಿಕ ಚಟುವಟಿಕೆಗಳ ಕುರಿತು ಇತಿಹಾಸಕಾರರು ಇನ್ನೂ ಅಧ್ಯಯನ ನಡೆಸಿಲ್ಲ.

ಸಾಮಾಜಿಕ ಬದಲಾವಣೆಯಲ್ಲಿ ಶಿಕ್ಷಣವು ಎಷ್ಟು ಪ್ರಮಾಣದಲ್ಲಿ ಕೆಲಸ ಮಾಡಿದೆ ಎಂಬುದನ್ನು ನಿರ್ಣಯಿಸಲು ಸಮಾಜಶಾಸ್ತ್ರಜ್ಞರು ಮತ್ತು ಮನಶಾಸ್ತ್ರಜ್ಞರ ಅಧ್ಯಯನಗಳನ್ನು ಇತಿಹಾಸತಜ್ಞರು ಬಳಸಿಕೊಳ್ಳಬೇಕಾಗುತ್ತದೆ. ಜಾತಿ, ಅಸ್ಪೃಶ್ಯತೆ, ವರದಕ್ಷಿಣೆ, ಮಹಿಳೆಯರ ಸ್ಥಾನಮಾನ, ಅವಿಭಜಿತ ಕುಟುಂಬ ಮುಂತಾದ ವಿಚಾರಗಳ ಕುರಿತು ಶಿಕ್ಷಣ ಪಡೆದವರ ಮನೋಭಾವವನ್ನು ಅಂಥ ಶಿಕ್ಷಣವು ಎಷ್ಟರ ಮಟ್ಟಿಗೆ ಬದಲಾಯಿಸಿತು?

ಆ್ಯಡಂ ಸ್ಮಿತ್ ಅವರ ಕಾಲದಿಂದ ಅರ್ಥಶಾಸ್ತ್ರಜ್ಞರು, ಆರ್ಥಿಕತೆಯ ಜೊತೆ ಶಿಕ್ಷಣವು ಹೊಂದಿರುವ ಸಂಬಂಧದತ್ತ ಆಸಕ್ತಿ ತೋರಿದ್ದಾರೆ. ಶಿಕ್ಷಣದ ಆರ್ಥಿಕತೆಯು ಶಾಸ್ತ್ರಬದ್ಧವಾದ ಉಪ ಬೋಧನಾ ಶಾಖೆ ಎನಿಸಿದೆ. ವಿದ್ಯಾವಂತರ ನಿರುದ್ಯೋಗಕ್ಕೆ ಕಾರಣಗಳು[೨೧], ಮಾನವ ಸಂಪನ್ಮೂಲದ ಸಮಸ್ಯೆಗಳು ಮತ್ತು ಶೈಕ್ಷಣಿಕ ಪ್ರಗತಿ[೨೨], ಮತ್ತು ಮಾನವ ಸಂಪನ್ಮೂಲದಲ್ಲಿ ಹೂಡಿಕೆಯ ಮಹತ್ವವನ್ನು[೨೩] ಅರ್ಥಶಾಸ್ತ್ರಜ್ಞರು ಅಧ್ಯಯನ ಮಾಡಿದ್ದಾರೆ. ಆದರೆ ಆರ್ಥಿಕ ಪ್ರಗತಿಯ ಮೇಲೆ ಶಿಕ್ಷಣವು ಹೇಗೆ ಪ್ರಗತಿ ಬೀರಿದೆ ಎನ್ನುವ ಗಂಭೀರವಾದ ಪ್ರಶ್ನೆಗೆ ಇತಿಹಾಸಕಾರರು ಉತ್ತರ ಕಂಡುಕೊಳ್ಳಬೇಕಿದೆ. ಶಿಕ್ಷಣದ ಪ್ರಗತಿಯ ನಂತರ ಆರ್ಥಿಕ ಪ್ರಗತಿ ಉಂಟಾಯಿತೇ ಅಥವಾ ಆರ್ಥಿಕ ಪ್ರಗತಿಯನ್ನು ಶಿಕ್ಷಣದ ಪ್ರಗತಿಯು ಅನುಸರಿಸಿತೇ ಅಥವಾ ಎರಡೂ ಪ್ರಗತಿಗಳು ಏಕಕಾಲದಲ್ಲಿ ನಡೆದಿವೆಯೇ?

ಶಿಕ್ಷಣದ ಇತಿಹಾಸವು ಎಷ್ಟೆಲ್ಲ ರೀತಿಯ ಇತಿಹಾಸವನ್ನು ವ್ಯಾಪಿಸಿದೆ ಎಂದರೆ ಅದು ಎಲ್ಲಿ ಪ್ರಾರಂಭಗೊಳ್ಳುತ್ತದೆ ಮತ್ತು ಎಲ್ಲಿ ಕೊನೆಗೊಳ್ಳುತ್ತದೆ ಎಂದು ಹೇಳುವುದು ಕಷ್ಟ. ಶಿಕ್ಷಣ ಮತ್ತು ಸಮಾಜದ ನಡುವೆ ಎಷ್ಟು ಬಲವಾದ ಒಡನಾಟವಿದೆ ಎಂದರೆ, ಇತಿಹಾಸದ ಪ್ರಕ್ರಿಯೆಯಲ್ಲಿ ಶಿಕ್ಷಣದ ಪಾತ್ರವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಶೈಕ್ಷಣಿಕ ವ್ಯವಸ್ಥೆಗೆ ಆಕಾರ ನೀಡುವ ಬಾಹ್ಯ ಪ್ರಭಾವಗಳಿಗೆ ಒಂದೆಡೆ ಗಮನ ನೀಡಬೇಕು, ಇನ್ನೊಂದೆಡೆ ಶಿಕ್ಷಣವು ಸಮಾಜದ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದರ ಮೇಲೂ ಗಮನ ನೀಡಬೇಕು. ಶಿಕ್ಷಣ ಮತ್ತು ಸಾಮಾಜಿಕ ರಚನೆಯ ನಡುವಿನ ಸಂಬಂಧವು ರಸ್ತೆಯ ಎರಡೂ ಕಡೆಗಳಿಂದ ವಾಹನ ಸಂಚಾರ ಇದ್ದಂತೆ.

ಭಾರತೀಯ ಶಿಕ್ಷಣದ ಸಮಗ್ರ ಇತಿಹಾಸವನ್ನು ಬರೆಯುವ ಮೊದಲು, ಕಾಲಾವಧಿ ಮತ್ತು ಪ್ರದೇಶಗಳ ಆಧಾರದಲ್ಲಿ ಸ್ಥಳೀಯ ಮಟ್ಟದಲ್ಲಿ ಅಧ್ಯಯನಗಳನ್ನು ನಡೆಸಬೇಕಾಗುತ್ತದೆ. ಈ ಸಂದರ್ಭದಲ್ಲಿ ಕೇಳಬೇಕಾದ ಪ್ರಶ್ನೆಗಳಲ್ಲಿ ಕೆಲವೊಂದು ಪ್ರಶ್ನೆಗಳನ್ನು ಮೇಲೆ ನೀಡಲಾಗಿದೆ. ಇದು ಅವುಗಳ ವರ್ಗೀಕರಣದ ಆರಂಭ ಅಷ್ಟೇ. ಇವುಗಳಿಗೆ ಉತ್ತರ ಕಂಡುಹಿಡಿಯುವುದು ಸುಲಭವಲ್ಲ. ಹಾಗೂ ಹೊಸ ರೀತಿಯ ಮೂಲಗಳು, ಜನಗಣತಿ ವರದಿಗಳು, ಖಾಸಗಿ ಪತ್ರಗಳು, ಘಟನಾವಳಿಗಳು, ದಿನಚರಿ, ಆತ್ಮಚರಿತ್ರೆಗಳು, ದೇವಸ್ಥಾನ ಮತ್ತು ಮಸೀದಿಯ ದಾಖಲೆಗಳು, ಸಾಂಸ್ಥಿಕ ದಾಖಲೆಗಳು ಮುಂತಾದುವುಗಳನ್ನು ಇತಿಹಾಸತಜ್ಞರು ಬಳಸಿಕೊಳ್ಳಬೇಕು. ಗತಕಾಲದ ಶಿಕ್ಷಣದ ಪ್ರಮಾಣ ಹಾಗೂ ಗುಣಮಟ್ಟದ ಕುರಿತು ಸಾಕ್ಷ್ಯಾಧಾರ ಪಡೆದುಕೊಳ್ಳುವುದು ಕಷ್ಟದ ಕೆಲಸ. ಇತಿಹಾಸತಜ್ಞರು ಅಂತಃಶಾಸ್ತ್ರೀಯ ವಿಧಾನವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಹದಿನಾರನೆಯ ಮತ್ತು ಹದಿನೇಳನೆಯ ಶತಮಾನದ ಇಂಗ್ಲೆಂಡ್‌ನ ಕುರಿತು ಕೆಲಸ ಮಾಡುವ ಇತಿಹಾಸತಜ್ಞರು ಈ ಪ್ರಯತ್ನವನ್ನು ಮಾಡಿದ್ದಾರೆ. ಇವರಲ್ಲಿ ಮಾರ್ಕ್ ಕರ್ಟಿಸ್[೨೪] ಮತ್ತು ವಿಸ್ತೃತ ಪ್ರಮಾಣದಲ್ಲಿ ಕೆಲಸ ಮಾಡಿರುವ ಲಾರೆನ್ಸ್

ಸ್ಟೋನ್‌ಖಿ ಪ್ರಮುಖರು. ಭಾರತೀಯ ಶಿಕ್ಷಣದ ಇತಿಹಾಸದ ಕುರಿತ ಪ್ರಶ್ನೆಗಳ ಮೇಲೆ ಬೆಳಕು ಚೆಲ್ಲಲು ಬೇಕಾಗುವ ಪರಿಕಲ್ಪನಾ ಮಾದರಿಯನ್ನು ಇನ್ನೂ ರೂಪಿಸಲಾಗಿಲ್ಲ. ಭಾರತೀಯ ಶಿಕ್ಷಣದ ಇತಿಹಾಸವು ಅಧ್ಯಯನದ ಹೊಸ ಪ್ರಮುಖ ಕ್ಷೇತ್ರವೆನಿಸಿದ್ದು ಇದರ ಸಂಭಾವ್ಯ ಸಾಮರ್ಥ್ಯವನ್ನು ಇನ್ನಷ್ಟೇ ಬಳಸಿಕೊಳ್ಳಬೇಕಿದೆ.

## ಉಲ್ಲೇಖಗಳು


1. ಹೆರಾಲ್ಡ್ ಸಿಲ್ವರ್, ದ ಕಾನ್ಸೆಪ್ಟ್ ಆಫ್ ಪೊಪುಲರ್ ಎಜುಕೇಶನ್, ಲಂಡನ್, ೧೯೬೫, ಮೇರಿ ಸ್ಟುವರ್ಟ್, ದ ಎಜುಕೇಶನ್ ಆಫ್ ದ ಪೀಪಲ್, ಲಂಡನ್, ೧೯೬೭.
2. ದ ಕ್ಯಾಂಬ್ರಿಜ್ ಗ್ರೂಪ್ ಫಾರ್ ದ ಹಿಸ್ಟರಿ ಆಫ್ ಪೊಪುಲೇಶನ್ ಅಂಡ್ ಸೋಷಿಯಲ್ ಸ್ಟ್ರಕ್ಚರ್ ಎಂಬ ಸಂಘಟನೆಯು ಸಾಕ್ಷರತೆಯನ್ನು ಅಳೆಯುವ ಸಮಸ್ಯೆಗೆ ತನ್ನ ಗಮನವನ್ನು ನೀಡಲು ಪ್ರಾರಂಭಿಸಿದೆ. ಎ ಸೊಸೈಟಿ ಫಾರ್ ದ ಸ್ಟಡಿ ಆಫ್ ದ ಹಿಸ್ಟರಿ ಆಫ್ ಎಜುಕೇಶನ್ ಎಂಬ ಸಂಸ್ಥೆಯನ್ನು ರೂಪಿಸಲಾಗಿದೆ. `ಜರ್ನಲ್ ಆಫ್ ಕಂಟೆಂಪರರಿ ಹಿಸ್ಟರಿ' ಇಡೀ ಸಂಪುಟವೊಂದನ್ನು ಶಿಕ್ಷಣ ಮತ್ತು ಸಾಮಾಜಿಕ ರಚನೆಗೆ ಮೀಸಲಿಟ್ಟಿದೆ.
3. ಎಸ್. ನೂರುಲ್ಲ ಮತ್ತು ಜೆ.ಪಿ. ನಾಯಕ್, ಎ ಹಿಸ್ಟರಿ ಆಫ್ ಎಜುಕೇಶನ್ ಇನ್ ಇಂಡಿಯಾ, ಬಾಂಬೆ, ೧೯೫೧.
4. ಎಫ್.ಇ. ಕೇ, ಇಂಡಿಯನ್ ಎಜುಕೇಶನ್ ಇನ್ ಏನ್ಶೆಂಟ್ ಅಂಡ್ ಲೇಟರ್ ಟೈಮ್ಸ್, ಒ.ಯು.ಪಿ, ೧೯೫೯ (೩ನೇ ಆವೃತ್ತಿ).
5. ಎಂ.ಎಲ್ ಜುಶಿ, ಎಜುಕೇಶನ್ ಇನ್ ಬ್ರಿಟೀಷ್ ಇಂಡಿಯಾ, ಅಲಹಾಬಾದ್, ೧೯೧೦.
6. ಪಿ.ಎಲ್. ರಾವತ್, ಎ ಹಿಸ್ಟರಿ ಆಫ್ ಇಂಡಿಯನ್ ಎಜುಕೇಶನ್, ಬಾಂಬೆ, ೧೯೩೫.
7. ಟಿ.ಎನ್. ಸಿಕ್ವೇರ, ದಿ ಎಜುಕೇಶನ್ ಆಫ್ ಇಂಡಿಯಾ, ಬಾಂಬೆ, ೧೯೩೫.
8. ಎಸ್.ಎನ್. ಮುಖರ್ಜಿ, ಹಿಸ್ಟರಿ ಆಫ್ ಎಜುಕೇಶನ್ ಇನ್ ಇಂಡಿಯಾ (ಮಾಡರ್ನ್ ಪೀರಿಯಡ್), ಬರೋಡಾ, ೧೯೫೫.
9. ದೇಶೀಯ ಶಿಕ್ಷಣದ ಅತ್ಯುತ್ತಮ ಮೂಲಗಳೆಂದರೆ, ೧೮೩೫, ೧೮೩೬, ೧೮೩೭ರಲ್ಲಿ ಸಲ್ಲಿಸಲಾದ ಡಬ್ಲೂ.ಠಯ. ಆ್ಯಡಂ ಅವರ ಬಂಗಾಳದ ದೇಶೀಯ ಶಿಕ್ಷಣದ ಕುರಿತ ವರದಿಗಳು, ಹಾಗೂ ನೋಡಿ ಆರ್.ವಿ. ಪಾರುಲೇಕರ್, ಲಿಟರಸಿ ಇನ್ ಇಂಡಿಯಾ ಇನ್ ಪ್ರಿ-ಬ್ರಿಟೀಷ್ ಡೇಸ್, ಪೂನಾ, ೧೯೪೦.
10. ೧೮೯೮-೧೯೨೦ರ ನಡುವಿನ ಶೈಕ್ಷಣಿಕ ನೀತಿಯ ವಿಶ್ಲೇಷಣೆಗಾಗಿ ನೋಡಿ ಅಪರ್ಣಾ ಬಸು, ಗ್ರೋತ್ ಆಫ್ ಎಜುಕೇಶನ್ ಅಂಡ್ ಪೊಲಿಟಿಕಲ್ ಡೆವೆಲಪ್‌ಮೆಂಟ್ ಇನ್ ಇಂಡಿಯಾ, ೧೮೯೮-೧೯೨೦, ಒ.ಯು.ಪಿ., ೧೯೭೪.

11. ಎ. ಜೆಲ್ನರ್, ಎಜುಕೇಶನ್ ಆಫ್ ಇಂಡಿಯಾ, ಎ ಸರ್ವೇ ಆಫ್ ದ ಲೋವರ್ ಗಂಗಾಸ್ ವ್ಯಾಲಿ ಇನ್ ಮಾಡರ್ನ್ ಟೈಮ್ಸ್, ನ್ಯೂಯಾರ್ಕ್, ೧೯೫೧.

ಜೆ.ಸ್ ಝಾ ಅವರು ``ಎಜುಕೇಶನ್ ಇನ್ ಬಿಹಾರ್, ೧೮೧೩-೫೮" ಮತ್ತು ಡಬ್ಲ್ಯು. ಡಬ್ಲ್ಯು. ಭಾವೆ ಅವರು ``ಮಧ್ಯ ಪ್ರದೇಶ, ೧೮೬೧-೧೯೪೭'' ಕುರಿತು ಡಾಕ್ಟರೇಟ್ ಪ್ರಬಂಧಗಳನ್ನು ಬರೆದಿದ್ದಾರೆ.

ಇವುಗಳ ಸಾರಾಂಶವನ್ನು ಸರ್ವೇ ಆಫ್ ರೀಸರ್ಚ್ ಇನ್ ಎಜುಕೇಶನ್, ಸಂ. ಎಂ.ಬಿ. ಬುಚ್, ಬರೋಡಾ, ೧೯೭೪ – ಇದರಲ್ಲಿ ಮುದ್ರಿಸಲಾಗಿದೆ. ಇವುಗಳಲ್ಲಿ ಹೆಚ್ಚಿನವು ಮೊದಲೇ ಊಹಿಸಬಹುದಾದ ಸಾಲುಗಳನ್ನು ಅನುಸರಿಸುತ್ತವೆ ಮತ್ತು ಸರ್ಕಾರಿ ವರದಿಗಳು ಮತ್ತು ನಿರ್ಣಯಗಳನ್ನು ಆಧರಿಸಿವೆ.

12. ಇ.ಪಿ ಥಾಮ್ಸನ್, ದ ಮೇಕಿಂಗ್ ಆಫ್ ದ ಇಂಗ್ಲಿಷ್ ವರ್ಕಿಂಗ್ ಕ್ಲಾಸ್, ನ್ಯೂಯಾರ್ಕ್, ೧೯೬೩, ಮತ್ತು ಆರ್.ಕೆ ವೆಬ್, ದ ಬ್ರಿಟೀಷ್ ವರ್ಕಿಂಗ್ ಕ್ಲಾಸ್ ರೀಡರ್, ೧೭೯೦-೧೮೪೮, ಲಂಡನ್, ೧೯೫೫. ಜೆ.ಎಫ್.ಸಿ ಹ್ಯಾರಿಸನ್, ಲರ್ನಿಂಗ್ ಅಂಡ್ ಲಿವಿಂಗ್, ೧೭೯೦-೧೯೬೦, ಎ ಸ್ಟಡಿ ಇನ್ ದ ಹಿಸ್ಟರಿ ಆಫ್ ಇಂಗ್ಲಿಷ್ ಅಡಲ್ಟ್ ಎಜುಕೇಶನ್ ಮೂವ್‌ಮೆಂಟ್, ಲಂಡನ್, ೧೯೬೧. ಇ.ಜಿ ವೆಸ್ಟ್, ಎಜುಕೇಶನ್ ಅಂಡ್ ದ ಇಂಡಸ್ಟ್ರಿಯಲ್ ರಿವೊಲೂಷನ್, ಲಂಡನ್, ೧೯೭೫.

13. ಎ. ಮಂಡಲ್, ``ದಿ ಐಡಿಯಾಲಜಿ ಅಂಡ್ ದ ಇಂಟರೆಸ್ಟ್ಸ್ ಆಫ್ ದ ಬೆಂಗಾಲಿ ಇಂಟೆಲಿಜೆನ್ಸಿಯಾ: ಸರ್ ಜಾರ್ಜ್ ಕ್ಯಾಂಬೆಲ್ಸ್ ಎಜುಕೇಶನ್ ಪಾಲಿಸಿ (೧೮೭೧-೭೪)''.

ಇಂಡಿಯನ್ ಎಕಾನಮಿಕ್ ಅಂಡ್ ಸೋಷಿಯಲ್ ಹಿಸ್ಟರಿ ರಿವೀವ್, ಆ. XII, ಸಂ. ೧ ಜನವರಿ-ಮಾರ್ಚ್, ೧೯೭೫.

14. ಎ. ಬಸು, ಗ್ರೋತ್ ಆಫ್ ಎಜುಕೇಶನ್ ಅಂಡ್ ಪೊಲಿಟಿಕಲ್ ಡೆವೆಲಪ್‌ಮೆಂಟ್, ಂಠಿ ಛಿiಣ., ಪು. ೬೪-೬೮.

15. ನೋಡಿ ಎ ಬಸು, ``ಗ್ರೋತ್ ಆಫ್ ಎಜುಕೇಶನ್ ಅಂಡ್ ಮುಸ್ಲಿಂ ಸಪರೇಟಿಸಂ,'' ಬಿ.ಆರ್ ನಂದಾ, ಸಂ., ಎಸ್ಸೇಸ್ ಇನ್ ಮಾಡರ್ನ್ ಇಂಡಿಯನ್ ಹಿಸ್ಟರಿ, D. II, ಪು. ೨೩೪.

16. ಹಂಡ್ರೆಡ್ ಯಿಯರ್ಸ್ ಆಫ್ ದ ಯುನಿವರ್ಸಿಟಿ ಆಫ್ ಕಲ್ಕತ್ತಾ, ಕಲ್ಕತ್ತಾ, ೧೯೫೭. ಎಸ್.ಆರ್ ಡೊಂಗರಕೇರಿ, ಎ ಹಿಸ್ಟರಿ ಆಫ್ ದ ಯುನಿವರ್ಸಿಟಿ ಆಫ್ ಬಾಂಬೆ, ಬಾಬೆ, ೧೯೫೭. ಯುನಿವರ್ಸಿಟಿ ಆಫ್ ಬಾಂಬೆ (೧೮೫೭-೧೯೫೭), ಶತಮಾನೋತ್ಸವ ಸ್ಮರಣ ಸಂಚಿಕೆ, ಬಾಂಬೆ, ೧೯೫೭.

17. ಹಿಸ್ಟರಿ ಆಫ್ ದ ಬನಾಸರ್ ಹಿಂದೂ ಯುನಿವರ್ಸಿಟಿ, ಸಂ., ಎಸ್.ಎಲ್ ದಾರ್ ಮತ್ತು ಎಸ್. ಸೋಮಸ್ಕಂದನ್, ಬನಾರಸ್, ೧೯೬೬.
18. ಎಪ್ಪತ್ತನೇ ವರ್ಷಾಚರಣೆಯ ಸ್ಮರಣ ಸಂಚಿಕೆ, ಅಲಹಾಬಾದ್ ವಿಶ್ವವಿದ್ಯಾಲಯ, ಅಲಹಾಬಾದ್, ೧೯೫೮.
19. ಶೆಲ್ಡನ್ ರೋತ್‌ಬ್ಲಾಟ್, ದ ರಿವೊಲೂಷನ್ ಆಫ್ ಡಾನ್ಸ್: ಕ್ಯಾಂಬ್ರಿಜ್ ಅಂಡ್ ಸೊಸೈಟಿ ಇನ್ ವಿಕ್ಟೋರಿಯನ್ ಇಂಗ್ಲಂಡ್, ನ್ಯೂಯಾರ್ಕ್, ೧೯೬೮.
20. ಲಾರೆನ್ಸ್ ಸ್ಟೋನ್, ``ದ ಸೈಜ್ ಅಂಡ್ ಕಾಂಪೋಸಿಷನ್ ಆಫ್ ದ ಆಕ್ಸ್‌ಫರ್ಡ್ ಸ್ಟೂಡೆಂಟ್ ಬಾಡಿ ೧೫೮೦-೧೯೧೦,'' ಲಾರೆನ್ಸ್ ಸ್ಟೋನ್, ಸಂ., ದ ಯುನಿವರ್ಸಿಟಿ ಇನ್ ಸೊಸೈಟಿ, ಆ. I; ಪ್ರಿನ್ಸ್‌ಟನ್, ೧೯೭೪.
21. ಡೇವಿಸ್ ಲ್ಯಾಂಡ್ಸ್, ದ ಅನ್‌ಬೌಂಡ್ ಪ್ರೊಮೀಥಿಯುಸ್; ಟೆಕ್ನಾಲಾಜಿಕಲ್ ಚೇಂಜ್ ಅಂಡ್ ಇಂಡಸ್ಟ್ರಿಯಲ್ ಡೆವೆಲಪ್‌ಮೆಂಟ್ ಇನ್ ವೆಸ್ಟರ್ನ್ ಯೂರೋಪ್ ಫ್ರಂ ೧೭೫೦ ಟು ದ ಪ್ರೆಸೆಂಟ್, ಕ್ಯಾಂಬ್ರಿಜ್, ೧೯೬೯, ಪು, ೩೪೩-೩೪೮. ಒಂದು ಕಡೆ ತಾಂತ್ರಿಕ ಮತ್ತು ವೈಜ್ಞಾನಿಕ ಶಿಕ್ಷಣ ಮತ್ತು ಇನ್ನೊಂದು ಕಡೆ ಆರ್ಥಿಕ ಪ್ರಗತಿಯ ನಡುವಿನ ಕೊಂಡಿಯು ಸಾಕ್ಷರತೆ ಮತ್ತು ಪ್ರಗತಿಯ ನಡುವಿನ ಕೊಂಡಿಗಿಂತ ಹೆಚ್ಚು ನೇರವಾದುದು ಎಂದು ಲ್ಯಾಂಡ್ಸ್ ವಾದಿಸುತ್ತಾರೆ.
22. ಬಿ.ಟಿ ಮೆಕಲಿ, ಇಂಗ್ಲಿಷ್ ಎಜುಕೇಶನ್ ಅಂಡ್ ದ ಒರಿಜಿನ್ಸ್ ಆಫ್ ದಿ ಇಂಡಿಯನ್ ನ್ಯಾಷನಲಿಸಂ, ನ್ಯೂಯಾರ್ಕ್, ೧೯೪೦. ಅನಿಲ್ ಸೀಲ್, ದಿ ಎಮರ್ಜೆನ್ಸ್ ಆಫ್ ಇಂಡಿಯನ್ ನ್ಯಾಷನಲಿಸಂ, ಕ್ಯಾಂಬ್ರಿಜ್, ೧೯೬೪.
23. ಅನಿಲ್ ಸೀಲ್, op cit

ಹಾಗೂ ನೋಡಿ ಇ. ಇಶ್ಚಿಕ್, ಪೊಲಿಟಿಕ್ಸ್ ಅಂಡ್ ಸೋಷಿಯಲ್ ಕಾನ್‌ಫ್ಲಿಕ್ಟ್ ಇನ್ ಸೌತ್ ಇಂಡಿಯಾ, ಬರ್ಕಲೀ, ಕ್ಯಾಲಿಫೋರ್ನಿಯಾ, ೧೯೬೯.

24. ಕೆ. ಜೋನ್ಸ್, ಆರ್ಯ ಧರ್ಮ, ದ ಗ್ರೋತ್ ಆಫ್ ಹಿಂದೂ ಕಾನ್ಶಿಯಸ್‌ನೆಸ್ ಇನ್ ನೈಂಟೀನ್ತ್ ಸೆಂಚುರಿ ಪಂಜಾಬ್. ಜೋನ್ಸ್ ಅವರು ಪಂಜಾಬ್‌ನಲ್ಲಿ ಆರ್ಯ ಸಮಾಜದ ಶೈಕ್ಷಣಿಕ ಚಟುವಟಿಕೆಗಳನ್ನು ಚರ್ಚಿಸುತ್ತಾರೆ.
25. ಇ.ಡಿ ಪಾಟ್ಸ್, ಬ್ರಿಟೀಷ್ ಬ್ಯಾಪ್ಟಿಸ್ಟ್ ಮಿಷನ್ಸ್ ಇನ್ ಇಂಡಿಯಾ, ಕ್ಯಾಂಬ್ರಿಜ್, ೧೯೬೭.

ಎಂ.ಎ ಲಾಯಿರ್ಡ್, ಮಿಷನರೀಸ್ ಅಂಡ್ ಎಜುಕೇಶನ್ ಇನ್ ಬೆಂಗಾಲ್, ಆಕ್ಸ್‌ಫರ್ಡ್, ೧೯೭೨.

ಕೆ.ಪಿ. ಸೇನ್‌ಗುಪ್ತಾ, ದ ಕ್ರಿಶ್ಚಿಯನ್ ಮಿಷನ್ಸ್ ಇನ್ ಬೆಂಗಾಲ್.

26. ಆರ್. ಹಾಡ್ಗ್ರೇವ್, ದ ನಾಡರ್ಸ್ ಆಫ್ ತಮಿಳ್‌ನಾಡು, ಕ್ಯಾಲಿಫೋರ್ನಿಯಾ, ೧೯೬೯.
27. ಎಫ್.ಜಿ. ಬೇಲಿ, ಕಾಸ್ಟ್ ಅಂಡ್ ಎಕಾನಮಿಕ್ ಫ್ರಂಟಿಯರ್.
28. ಆವನ್ ಲಿಂಚ್, ದ ಪೊಲಿಟಿಕ್ಸ್ ಆಫ್ ಅನ್‌ಟಚೆಬಿಲಿಟಿ, ಎ ಕೇಸ್ ಸ್ಟಡಿ ಆಫ್ ಆಗ್ರಾ.
29. ಎಲ್. ಕ್ಯಾರೊಲ್, ``ಕಾಯಸ್ಥ ಸಮಾಚಾರ್: ಫ್ರಂ ಎ ಕಾಸ್ಟ್ ಟು ಎ ನ್ಯೂಸ್‌ಪೇಪರ್."

ಐ.ಇ ಮತ್ತು ಎಸ್.ಎಚ್.ಆರ್. ಆ. ಫಿ, ಸಂ. ೩. ಜುಲೈ-ಸೆಪ್ಟೆಂಬರ್, ೧೯೭೩.

30. ಘನಶ್ಯಾಂ ಶಹಾ, ಕಾಸ್ಟ್ ಅಂಡ್ ಅಸೋಸಿಯೇಶನ್ ಅಂಡ್ ಪೊಲಿಟಿಕಲ್ ಪ್ರೋಸೆಸ್ ಇನ್ ಗುಜರಾತ್ : ಎ ಸ್ಟಡಿ ಆಫ್ ಗುಜರಾತ್ ಕ್ಷತ್ರಿಯ ಸಭಾ, ಬಾಂಬೆ, ೧೯೭೫.
31. ಎಂ. ಬ್ಲಾಗ್, ಆರ್. ಲೇಯರ್ಡ್, ಎಂ. ವುಡ್‌ಹಾಲ್, ದ ಕಾಸಸ್ ಆಫ್ ಗ್ರಾಜುವೆಟ್ ಅನ್‌ಎಂಪ್ಲಾಯ್‌ಮೆಂಟ್ ಇನ್ ಇಂಡಿಯಾ, ಲಂಡನ್, ೧೯೬೮.
32. ಓ. ಬರ‍್ರಿಸ್, ಆರ್. ಲೇಯರ್ಡ್, ಪಿ. ಪಂತ್, ಮ್ಯಾನ್‌ಪವರ್ ಅಂಡ್ ಎಜುಕೇಶನಲ್ ಡೆವೆಲಪ್‌ಮೆಂಟ್ ಇನ್ ಇಂಡಿಯಾ, ಲಂಡನ್, ೧೯೬೮.
33. ಎ.ಸಿ. ಹಾರ್ಬಿಂಗರ್, ``ಇನ್ವೆಸ್ಟ್ಮೆಮಟ್ ಇನ್ ಮ್ಯಾನ್ ವರ್ಸಸ್ ಇನ್ವೆಸ್ಟ್ಮೆಂಟ್ ಇನ್ ಮಷಿನ್ಸ್ : ದ ಕೇಸ್ ಆಫ್ ಇಂಡಿಯಾ,'' ಸಿ.ಎ. ಆಂಡರ್ಸನ್ ಮತ್ತು ಎಂ.ಜೆ. ಬೌಮನ್ (ಸಂ.) ಎಜುಕೇಶನ್ ಅಂಡ್ ಎಕಾನಮಿಕ್ ಡೆವೆಲಪ್‌ಮೆಂಟ್, ಲಂಡನ್, ೧೯೬೬.
34. ಮಾರ್ಕ್ ಕರ್ಟಿಸ್, ``ದಿ ಏಲಿಯನೇಟೆಡ್ ಇಂಟೆಲೆಕ್ಚುವಲ್ಸ್ ಆಫ್ ಅರ್ಲಿ ಸ್ಟುವರ್ಟ್ ಇಂಗ್ಲಂಡ್,'' ಪಾಸ್ಟ್ ಅಂಡ್ ಪ್ರೆಸೆಂಟ್, ಸಂ. ೨೮. ಜುಲೈ ೧೯೬೪, ಪು. ೪೧-೮೦.
35. ಲಾರೆನ್ಸ್ ಸ್ಟೋನ್, ``ದಿ ಎಜುಕೇಶನಲ್ ರಿವೊಲೂಷನ್ ಇನ್ ಇಂಗ್ಲಂಡ್, ೧೬೪೦-೧೯೦೦.''
ಪಾಸ್ಟ್ ಅಂಡ್ ಪ್ರೆಸೆಂಟ್, ಸಂ. ೪೨, ಫೆಬ್ರುವರಿ, ೧೯೬೯, ಪು. ೬೬-೧೩೯.
ಹಾಗೂ ನೋಡಿ ಎಲ್. ಸ್ಟೋನ್, ``ದ ಕಾಸಸ್ ಆಫ್ ದ ಇಂಗ್ಲಿಷ್ ರಿವೊಲೂಷನ್,'' ಆರ್. ಫಾರ್‌ಸ್ಟರ್ ಮತ್ತು ಜೆ.ಪಿ. ಗ್ರೀನ್, ಸಂ., ಪ್ರೀಕಂಡೀಷನಸ್ ಆಫ್ ರಿವೊಲೂಷನ್ ಇನ್ ಅರ್ಲಿ ಮಾಡರ್ನ್ ಯೂರೋಪ್, ಬಾಲ್ಟಿಮೋರ್, ೧೯೭೦.